**1ನೇ ಹೆಚ್ಚುವರಿ ಸಿವಿಲ್ ದಂಡಾಧಿಕಾರಿಯವರ ನ್ಯಾಯಾಲಯ ಚನ್ನಗಿರಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 2723/2024**

**ಪಿರ್ಯಾದುದಾರರು :** **ವಿರುದ್ಧ** **ಆರೋಪಿತರು:**

ಚನ್ನಗಿರಿ ಪೊಲೀಸ್ ಠಾಣೆ

ಎ1. ಕಾದರ್ ಎಂ ಬಿನ್ ಬೋರಿ ಜಬ್ಬಾರ್ ಸಾಬ್
ವಯಸ್ಸುಃ 40 ವರ್ಷ
ಎ2. ಮೆಹಬೂಬ್ ಖಾನ್ ಬಿನ್ ಸಬ್ಬರ್ ಖಾನ್
ವಯಸ್ಸುಃ 30 ವರ್ಷ
ಇಬ್ಬರ ವಾಸಃ ಟಿಪ್ಪುನಗರ, ಚನ್ನಗಿರಿ

**ದೋಷಾರೋಪಣೆ**

ಶ್ರೀಮತಿ ಮಹಾಲಕ್ಷ್ಮೀ ಜಿ 2ನೇ ಹೆಚ್ಚುವರಿ ಸಿವಿಲ್.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿತರಾದ ನೀವು:-

ಮೊದಲನೆಯದಾಗಿ ಚಾಸಾ-1ರವರು ಸಂತೆಬೆನ್ನೂರು ಗ್ರಾಮದಲ್ಲಿರುವ ತಮ್ಮ ಬಾಬ್ತು ಖಾನೆ ಸುಮಾರಿ ನಂ 3848/436/2 ರ ಆಸ್ತಿಯನ್ನು 1ನೇ ಆರೋಪಿಗೆ ದಿಃ 19-06-2013 ರಂದು 2 ಲಕ್ಷ ರೂ.ನಂತೆ ಮಾರಾಟ ಮಾಡಿ ಕರಾರು ಮಾಡಿಕೊಂಡು 1 ನೇ ಅರೋಪಿಯಾದ ನೀನು ಒಂದು ಲಕ್ಷದ ಐವತ್ತೈದು ಸಾವಿರ ರೂಗಳನ್ನು ಪಡೆದುಕೊಂಡು ಉಳಿದ ಹಣವನ್ನು ನಂತರ ಕೊಡುತ್ತೇನೆ ಎಂದು ಕೇಳಿದ್ದಕ್ಕೆ ಚಾಸಾ-1ರವರು ಒಪ್ಪಿರುವುದಿಲ್ಲ ಇದೇ ದ್ವೇಷದಿಂದ ದಿಃ 15-4-2023 ರಂದು ಬೆಳಿಗ್ಗೆ 9.00 ಗಂಟೆಗೆ ಚಾಸಾ1ರವರು ಚನ್ನಗಿರಿಯ ನೃಪತುಂಗ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ 1 ಮತ್ತು 2ನೇ ಅರೋಪಿತರಾದ ನೀವು ಚಾಸಾ-1 ರವರನ್ನು ಅಡ್ಡಗಟ್ಟಿ ತಡೆದು ಗಲಾಟೆ ಮಾಡಿರುತ್ತೀರ ಆದ್ದರಿಂದ ನಿಮ್ಮ ವಿರುದ್ದ ಭಾ.ದಂ.ಸಂ.ಕಲಂ 341, ಸಹ ಕಲಂ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 1 ಮತ್ತು 2ನೇ ಆರೋಪಿತರಾದ ನೀವು ಚಾಸಾ1 ರವರಿಗೆ ಬಾಯಿ ಮಾತಿನಲ್ಲಿ ಜಗಳ ಮಾಡುತ್ತಾ 1ನೇಅರೋಪಿಯಾದ ನೀನು ಏನೋ ಸೂಳೆಮಗನೇ ಮುದುಕ ದುಡ್ಡು ಕೇಳ್ತಿಯ ನನ್ನ ಬಳಿ ದುಡ್ಡುಕೊಡಲ್ಲ ನಾನು ಈಗಾಗಲೇ ಕರಾರುಪತ್ರ ಬರೆಸಿಕೊಂಡಿರುತ್ತೇನೆ. ಆಸ್ತಿಯನ್ನು ನನ್ನ ಹೆಸರಿಗೆ ನೀನೇ ಮಾಡಿಕೊಂಡು ಎಂದು ಅವಾಚ್ಯ ಶಬ್ಬಗಳಿಂದ ಬೈಯ್ದು ಗಲಾಟೆ ಮಾಡಿರುವುದರಿಂದ ನಿಮ್ಮ ವಿರುದ್ದ ಭಾ.ದಂ.ಸಂ.ಕಲಂ 504 ಸಹ ಕಲಂ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 1 ಮತ್ತು 2ನೇ ಆರೋಪಿತರಾದ ನೀವು ಚಾಸಾ1 ರವರಿಗೆ ಕೈ ಕಾಲುಗಳಿಂದ ಎಡಕೈ ಗೆ ಹೊಟ್ಟೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸುವುದರ ಮೂಲಕ ಭಾ.ದಂ.ಸಂ. ಕಲಂ 323, ಸಹ ಕಲಂ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

(ಮೇಲೆ ಹೇಳಿದ ಆರೋಪಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿರುತ್ತೀರಾ ಎಂದು ನಿರ್ದೇಶಿಸಿದ್ದೇನೆ)

ದಿನಾಂಕ: 08-10-2025

**(ಶ್ರೀಮತಿ ಮಹಾಲಕ್ಷ್ಮೀ ಜಿ )**
**1ನೇ ಹೆಚ್ಚುವರಿ ಪ್ರ.ದ.ನ್ಯಾ ,**
**ದಂಡಾಧಿಕಾರಿ, ಚನ್ನಗಿರಿ.**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ,**

**ನ್ಯಾಯಾಲಯದಲ್ಲಿ**

**<u>ಸಿಸಿ ನಂ:</u>2723/2024**

**1. ಕರ್ನಾಟಕ ಸರ್ಕಾರ (ಚನ್ನಗಿರಿ ಪಿ.ಎಸ್ )**

**ವಿರುದ್ಧ**

ಎ2. ಮೆಹಬೂಬ್ ಖಾನ್ ಬಿನ್ ಸಬ್ಬರ್ ಖಾನ್
ವಯಸ್ಸುಃ 30 ವರ್ಷ

## <u>ಆರೋಪಿಯ ಹೇಳಿಕೆ</u>

1. ಈಗ ಓದಿ ಹೇಳಿದ ನಿನ್ನ ಮೇಲಿನ ಆಪಾದೆನೆಯನ್ನು ಕೇಳಿದ್ದಿಯಾ? ತಿಳಿಯಿತೇ?

ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆರೋಪಿತಳಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ 08-10-2025 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವನುಃಳು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

ದಿನಾಂಕ: 08-10-2025

**(ಶ್ರೀಮತಿ ಮಹಾಲಕ್ಷ್ಮೀ ಜಿ )**

**1ನೇ ಹೆಚ್ಚುವರಿ ಪ್ರ.ದ.ನ್ಯಾ ,**
**ದಂಡಾಧಿಕಾರಿ, ಚನ್ನಗಿರಿ.**